*ಕರ್ನಾಟಕ ಸರ್ಕಾರ* *(ಸಿ.ಆರ್.ಪಿ.67)*

*ಹೇಳಿಕೆ ಹಾಳೆ*
*(ಆರ್.ಪಿ.ಸಂಖ್ಯೆ 57)*
*ನಮೂನೆ ಸಂಖ್ಯೆ 4*
*(ಸಿವಿಲ್)*

***ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ.***

***ಎಸ್.ಸಿ.ಸಂಖ್ಯೆ:54/2008***

***ಪ್ರಾಸಾ 08***

***ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕಃ 04.02.2019***

| | | |
|---|---|---|
| ***ಸಾಕ್ಷಿಯ ಹೆಸರು*** | : | ***ವಿ. ನಾರಾಯಣಸ್ವಾಮಿ*** |
| ***ತಂದೆಯ ಹೆಸರು*** | : | ***ಲೇಟ್.ವೆಂಕಟಸ್ವಾಮಿ*** |
| ***ವಯಸ್ಸು*** | : | ***59 ವರ್ಷ*** |
| ***ಉದ್ಯೋಗ*** | : | ***ಪಿಎಸ್ಐ, ನಂದಿಗಿರಿಧಾಮ ಪೊ.ಠಾಣೆ*** |
| ***ವಾಸಸ್ಥಳ*** | : | ***ಚಿಕ್ಕಬಳ್ಳಾಪುರ*** |

***ಃ ಕಲಂ.299 ಸಿಆರ್‌ಪಿಸಿ ಅಡಿಯಲ್ಲಿನ ಸಾಕ್ಷಿಯ ವಿಚಾರಣೆ ಃ***

***(ಈ ಪ್ರಕರಣದಲ್ಲಿ 2ನೇ ಆರೋಪಿಯ ವಿರುದ್ಧ ಹೊರಡಿಸಲಾಗಿದ್ದ ಪ್ರೊಕ್ಲಮೇಷನ್‌ನ್ನು ಜಾರಿಮಾಡಿದ್ದ ಹೆಚ್.ಸಿ.122 ರವರು ಮರಣಹೊಂದಿರುವ ಕಾರಣ ಸದರಿ ಶ್ರೀರಾಮಯ್ಯರವರು ಗೌರಿಬಿದನೂರು ನಗರ ಪೊಲೀಸ್ ಠಾಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಮಯದಲ್ಲಿ ಅವರೊಂದಿಗೆ ಕೆಲಸ ಮಾಡಿದ್ದ ವಿ. ನಾರಾಯಣಸ್ವಾಮಿ ರವರನ್ನು ಸಾಕ್ಷಿ ಮಾಡಿ ಅವರ ಮುಖಾಂತರ ತನ್ನ***

*ಸಹೋದ್ಯೋಗಿಯಾಗಿದ್ದ ಹೆಚ್‌ಸಿ.122 ಶ್ರೀರಾಮಯ್ಯ ರವರು ಜಾರಿಮಾಡಿದ್ದ ಪ್ರೊಕ್ಲಮೇಷನ್ ಮಹಜರ್‌ನ್ನು ಮತ್ತು ಅವರ ಸಹಿಯನ್ನು ಗುರುತಿಸಲಾಯಿತು.)*

*<u>ಮುಖ್ಯ ವಿಚಾರಣೆ: </u>ಸರ್ಕಾರಿ ಅಭಿಯೋಜಕರಿಂದಃ*

*1) ನಾನು ಮೇ 2005 ರಿಂದ ಜೂನ್ 2010 ರವರೆಗೂ ಗೌರಿಬಿದನೂರಿನ ಪುರ ಠಾಣೆಯಲ್ಲಿ ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.*

*2) ಆ ಸಮಯದಲ್ಲಿ ಶ್ರೀರಾಮಯ್ಯನವರು ಸದರಿ ಠಾಣೆಯಲ್ಲಿ ಹೆಚ್.ಸಿ.122 ಆಗಿ ಕರ್ತವ್ಯ ನಿರ್ವಹಿಸಿರುತ್ತಾರೆ ಮತ್ತು ಸದರಿಯವರು ಈ ಪ್ರಕರಣದ ಆರೋಪಿಯ ವಿರುದ್ಧ ಹೊರಡಿಸಲಾಗಿದ್ದ ಪ್ರೊಕ್ಲಮೇಷನ್ ವಾರೆಂಟನ್ನು ಜಾರಿಮಾಡಿದ್ದ ಬಗ್ಗೆ ನನಗೆ ತಿಳಿದಿರುತ್ತದೆ. ನಾನು ಸದರಿ ಶ್ರೀರಾಮಯ್ಯನವರ ಸಹಿಯನ್ನು ನೋಡಿರುತ್ತೇನೆ ಮತ್ತು ಅವರ ಸಹಿಯನ್ನು ನೋಡಿದರೆ ಗುರ್ತಿಸುತ್ತೇನೆ. ನಾನು ಈಗ ಸದರಿಯವರು ಪ್ರೊಕ್ಲಮೇಷನ್ ವಾರೆಂಟನ್ನು ಜಾರಿಮಾಡಿ ಜರುಗಿಸಿದ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಅದರಲ್ಲಿನ ಹೆಚ್.ಸಿ.122 ಶ್ರೀರಾಮಯ್ಯನವರ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.*

*<u>ಪಾಟೀಸವಾಲು: </u>ಕಲಂ.299 ಸಿಆರ್‌ಪಿಸಿ ಅಡಿಯಲ್ಲಿನ ವಿಚಾರಣೆಯಾಗಿರುವುದರಿಂದ ಪಾಟೀ ಸವಾಲು ಇರುವುದಿಲ್ಲ.*

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 04.02.2019 ರಂದು ಬೆರಳಚ್ಚು ನಕಲುಗಾರ್ತಿಯಿಂದ ಬೆರಳಚ್ಚು ಮಾಡಿಸಲಾಯಿತು)*

*ಓದಿ ಹೇ ಕೇ ಸರಿ ಇದೆ*
*ಸಹಿ/-*
*(ಭಾನುಮತಿ.ಬಿ.ಸಿ.)*
*ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,*
*ಚಿಕ್ಕಬಳ್ಳಾಪುರ.*